# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 748 (828)

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಉತ್ತರಿಸುವ ದಿನಾಂಕ : 19.08.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರಾವಳಿ ಕರ್ನಾಟಕದಲ್ಲಿ ಇನ್ವೆಸ್ಟರ್ ಮೀಟ್ ನಡೆಸಬೇಕೆಂಬ ಬೇಡಿಕೆ ಸಾರ್ವಜನಿಕರಿಂದ ಇದ್ದು, ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ; | ಕರಾವಳಿ ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಸಮಾವೇಶ ಹಮ್ಮಿಕೊಳ್ಳುವ ಉದ್ದೇಶ ರಾಜ್ಯ ಸರ್ಕಾರದ ಮುಂದೆ ಸದ್ಯ ಇರುವುದಿಲ್ಲ. |
| ಆ | ಪ್ರವಾಸೋದ್ಯಮ ಮತ್ತು ಕೈಗಾರಿಕೆ, ಐ.ಟಿ. ಬಿ.ಟಿಗಳಲ್ಲಿ ಅವಕಾಶಗಳು ಇದ್ದು, ಈ ಭಾಗದಲ್ಲಿ ಹೂಡಿಕೆದಾರರ ಸಮಾವೇಶ ನಡೆಸಿದ್ದಲ್ಲಿ ಕರಾವಳಿ ಭಾಗದ ಅಭಿವೃದ್ಧಿಗೆ ತುಂಬಾ ಸಹಕಾರಿ ಆಗುವುದೆಂದು ಭಾವಿಸಲಾಗಿದ್ದು, ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ; (ವಿವರ ನೀಡುವುದು) | ಕರಾವಳಿ ಪ್ರದೇಶದಲ್ಲಿ ಪ್ರವಾಸೋದ್ಯಮ, ಕೈಗಾರಿಕೆ ಮತ್ತು, ಐ.ಟಿ.ಬಿ.ಟಿ.ಗಳ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಸಂಬಂಧ ಇಲಾಖೆಯು ಹಮ್ಮಿಕೊಳ್ಳುವ ರೋಡ್‌ಶೋಗಳಲ್ಲಿ ಹೂಡಿಕೆದಾರರಿಗೆ ಸದಾವಕಾಶ ಇರುವ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. |
| ಇ | ಈ ಜಿಲ್ಲೆಯಲ್ಲಿರುವ ಬೃಹತ್ ಕೈಗಾರಿಕೆಗಳಿಂದ ಸ್ಥಳೀಯರಿಗೆ ಉದ್ಯೋಗ ನೀಡಬೇಕೆಂಬ ಬೇಡಿಕೆಗಳಿದ್ದರೂ ಅದನ್ನು ನೀಡುವಲ್ಲಿ ಕೈಗಾರಿಕೆಗಳು ವಿಫಲವಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಕೈಗಾರಿಕಾ ನೀತಿ 2020-25 ಹಾಗೂ 2025-30 ರಡಿ ಉತ್ತೇಜನ ಹಾಗೂ ರಿಯಾಯಿತಿಗಳನ್ನು ಪಡೆಯುವ ಕೈಗಾರಿಕೆಗಳು ಒಟ್ಟಾರೆಯಾಗಿ ಶೇ. 70 ರಷ್ಟು ಹಾಗೂ ಗ್ರೂಪ್-ಡಿ ವರ್ಗದವರಿಗೆ ಶೇ. 100 ರಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶ ಒದಗಿಸಬೇಕಿದ್ದು, ಈ ಮಾನದಂಡದಂತೆ ಸ್ಥಳೀಯರಿಗೆ ಉದ್ಯೋಗ ಒದಗಿಸದೇ ಇದ್ದಲ್ಲಿ, ರಿಯಾಯಿತಿ ಹಾಗೂ ಉತ್ತೇಜನಗಳನ್ನು ನೀಡಲಾಗುವುದಿಲ್ಲ. |

<table>
<tr>
<td>ಈ</td>
<td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಭೂಮಿ ಕಳೆದುಕೊಂಡವರಿಗೆ ನೀಡಿದ ಉದ್ಯೋಗಗಳು ಎಷ್ಟು; ಭೂಮಿ ನೀಡಿದ ಕುಟುಂಬಗಳೆಷ್ಟು? (ವಿವರ ನೀಡುವುದು)</td>
<td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿ ಕಳೆದುಕೊಂಡವರಿಗೆ ನೀಡಿದ ಉದ್ಯೋಗಗಳ ವಿವರಗಳನ್ನು ಈ ಕೆಳಕಂಡಂತೆ ನೀಡಿದೆ:
<table>
<tr><th>ಕಂಪನಿ ಹೆಸರು</th><th>ಜಿಲ್ಲೆ</th><th>ನಿರ್ವಸಿತರ ಕುಟುಂಬಗಳ ಸಂಖ್ಯೆ</th><th>ನಿರ್ವಸಿತರ ಪೈಕಿ ಉದ್ಯೋಗ ಪಡೆದ ಕುಟುಂಬದ ಸಂಖ್ಯೆ</th><th>ಉದ್ಯೋಗದ ಬದಲು ಒಂದು ಬಾರಿಯ ಪರಿಹಾರ ಧನ ಪಡೆದವರ ಸಂಖ್ಯೆ</th><th>ಷರಾ</th></tr>
<tr><td>MSEZ</td><td>ದಕ್ಷಿಣ ಕನ್ನಡ</td><td>1628</td><td>639</td><td>892</td><td>97 ಅಭ್ಯರ್ಥಿಗಳಿಗೆ ಇನ್ನೂ ಉದ್ಯೋಗ ಕೊಡಲು ಬಾಕಿ ಇರುತ್ತದೆ.</td></tr>
<tr><td>MRPL</td><td>ದಕ್ಷಿಣ ಕನ್ನಡ</td><td>553</td><td>439</td><td>114</td><td></td></tr>
</table>
</td>
</tr>
</table>

ಕಡತ ಸಂಖ್ಯೆ ಸಿಐ 251 ಎಸ್‌ಪಿಐ 2025

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು